ದಿನಾಂಕ 26.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- ಶ್ರೀ.ಸಿ.ಎಲ್.ಎಸ್.ವಕೀಲರಿಂದಃ-</u>**

2. ನನ್ನ ಅಜ್ಜನ ಹೆಸರು ಯಂಕಟಯ್ಯ. ಅವರಿಗೆ ತಿಮ್ಮ ಯ್ಯ, ಅಪ್ಪಣ್ಣ, ಅಣ್ಣಯ್ಯ ಮತ್ತು ಶಿವಯ್ಯ ಯಾನೆ ವೆಂಕಟಪ್ಪ ಎಂಬ 4 ಜನ ಮಕ್ಕಳು. ವಾದಿ ನನ್ನ ಚಿಕ್ಕಪ್ಪನ ಮಗಳು. ನನ್ನ ಅಜ್ಜನಿಗೆ ಎಷ್ಟು ಆಸ್ತಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು, ಎಷ್ಟು ವಿಸ್ತೀರ್ಣದ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇದ್ದರು ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ನನ್ನ ತಂದೆಯು ಅಂದಾಜು 15 ಎಕರೆ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು. ಅದರ ಪೈಕಿ ಅಂದಾಜು 6 ಎಕರೆ ಸ್ವತ್ತನ್ನು ಅವರ ತಮ್ಮನಾದ ಅಣ್ಣಯ್ಯರವರಿಂದ ಖರೀದಿಸಿದ್ದರು.

3. ನನ್ನ ತಂದೆಗೆ ಇಬ್ಬರು ಪತ್ನಿಯರು. ಮೊದಲನೇಯ ಪತ್ನಿಗೆ ರಾಧ ಎಂಬ ಮಗಳು ಇದ್ದು, ನಾನು ಎರಡನೇ ಪತ್ನಿಯ ಮಗಳು. ನನ್ನ ತಂದೆಯ ಪೂರ್ಣ ಆಸ್ತಿ ನನ್ನ ಸ್ವಾಧೀನದಲ್ಲಿ ಇದೆ. ನನ್ನ ಅಕ್ಕ ನನ್ನ ವಿರುದ್ದ ಭಾಗಂಶ

ಕೋರಿ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ.

4. ನನ್ನ ತಂದೆ ಮತ್ತು ಅವರ ಸಹೋದರರು ಸುಮಾರು ವರ್ಷಗಳ ಹಿಂದೆಯೇ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಅವರುಗಳ ಹಿಸ್ಸೆಗೆ ಬಂದ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇದ್ದರು. ನನ್ನ ತಂದೆಯ ತಮ್ಮನಾದ ಅಪ್ಪಣ್ಣನಿಗೆ ವೆಂಕಟೇಶ್, ಚಂದ್ರಶೇಖರ ಮತ್ತು ಯಶೋಧ ಎಂಬ 3 ಜನ ಮಕ್ಕಳು. ವೆಂಕಟೇಶ್ ಮತ್ತು ಚಂದ್ರಶೇಖರ್ ರವರು ಈಗ ಮೃತರಾಗಿದ್ದು, ಅವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ತಂದೆಯ ಹಿಸ್ಸೆಗೆ ಬಂದಿದ್ದ ಸ್ವತ್ತುಗಳನ್ನು ನಿವೇಶನಗಳನ್ನಾಗಿ ವಿಂಗಡಿಸಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಳೆದ 30 ವರ್ಷಗಳಿಂದ ಸೀಗೆತೋಡು ಗ್ರಾಮದಲ್ಲಿ ವಾಸವಾಗಿದ್ದೇನೆ.

5. ದಾವಾ ಸ್ವತ್ತುಗಳು ಸೀಗೆತೋಡು ಗ್ರಾಮದಲ್ಲಿ ಇವೆ. ದಾವಾ ಸ್ವತ್ತುಗಳ ಸರ್ವೆ ನಂಬರುಗಳು ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು 4ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇವೆ. ದಿಃ 10.11.2004 ರ ಕ್ರಯಪತ್ರವನ್ನು ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಮಾಡಲಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಕ್ರಯಪತ್ರದ ಒಕ್ಕಣೆಗಳನ್ನು ನಾನು ಓದಿರುವುದಿಲ್ಲ.

6.ಕ್ರಯಪತ್ರದಲ್ಲಿ ನಮೂದಿಸಿರುವ ಸ್ವತ್ತು ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವುದಕ್ಕಿಂತ ಮೊದಲು ವಾದಿಯ ಸ್ವಾಧೀನಾನುಭವದಲ್ಲಿ ಇತ್ತು. ಸದರಿ ಸ್ವತ್ತಿನ ಕಂದಾಯ ದಾಖಲೆಗಳು ಯಾರ ಹೆಸರಿನಲ್ಲಿ ಇದ್ದವು ಎಂಬುದು ನನಗೆ ಗೊತ್ತಿಲ್ಲ. ದಿಃ 10.11.2004 ರಂದು ನಾನು ವಿಭಾಗಪತ್ರಕ್ಕೆ ಸಹಿ ಮಾಡಿರುತ್ತೇನೆಯೇ ಹೊರತು, ಕ್ರಯಪತ್ರಕ್ಕೆ ಸಹಿ ಮಾಡಿರುವುದಿಲ್ಲ.

7. ದಿಃ 10.11.2004 ರ ಪತ್ರದಲ್ಲಿ ರೂ. 2,42,000/- ಗಳಿಗೆ ಸ್ವತ್ತನ್ನು ವಿಕ್ರಯಿಸಲಾಗಿದೆ ಎಂಬುದಾಗಿ ತಪ್ಪಾಗಿ ನಮೂದಿಸಲಾಗಿದೆ. ಕ್ರಯಪತ್ರದಡಿ ನಾನು ನನ್ನ ಪಾಲಿನ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕುಟುಂಬದ ಸ್ವತ್ತನ್ನು ದಿಃ 10.11.2004 ರ ಕ್ರಯಪತ್ರದ ಮೂಲಕ ನಾನು ಮತ್ತು 1 ರಿಂದ 3 ನೇ ಪ್ರತಿವಾದಿಗಳು, ವೆಂಕಟೇಶ್, ಚಂದ್ರಶೇಖರ್ ರವರು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಹಿಸ್ಸೆಗೆ ಕುಟುಂಬದ ಸ್ವತ್ತುಗಳ ಹೋಗಿದ್ದರೂ ಸಹ ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಯ ತಂದೆಯ ಹಿಸ್ಸೆಗೆ ಬಂದಂತಹ

ಸ್ವತ್ತುಗಳಾಗಿರುವುದರಿಂದ ಅವುಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.